


ಕಪ್ ಎತ್ತಿ ಹಿಡಿದ ಕ್ಷಣದಲ್ಲಿ ಸಂಭ್ರಮದ ಹೊನಲು

# ಗೆಲುವಿನ ಹೂನಗೆ... ಸಂಭ್ರಮದ ಈ ಬಗೆ

■ ವಿಶಾಖ ಎನ್.

ಅದೇ ಬಾನು, ಅದೇ ಭೂಮಿ; ಈ ನಯನ ನೂತನ. ಅದು ಮಹಿಳಾ ನೋಟದ ಗಮ್ಮತ್ತು. ಎರಡು ಜಡೆಗಳು ಎಂದೂ ಒಂದಾಗಿ ಒಳ್ಳೆಯ ರೀತಿ ಕೆಲಸ ಮಾಡಲಾರವು ಎನ್ನುವ ಆರೋಪವೊಂದನ್ನು ಅನೇಕರು ಸಾರ್ವತ್ರೀಕರಣಗೊಳಿಸಿದ್ದರು. ಅದನ್ನು ಸುಳ್ಳಾಗಿಸಿದ್ದು ನೂತನ ನಯನ... ಅರ್ಥಾತ್ ಹೊಸ ಹೆಣ್ಣು ನೋಟ. ಭಾರತ ಮಹಿಳೆಯರ ತಂಡ ವಿಶ್ವಕಪ್ ಕ್ರಿಕೆಟ್ ಚಾಂಪಿಯನ್ ಆದ ಸುವರ್ಣ ಗಳಿಗೆಯನ್ನು ಇನ್ನಷ್ಟು ಮತ್ತಷ್ಟು ಸಂಭ್ರಮಿಸಲು ಕಾರಣವೇ ಆ ನೋಟ. ಹರ್ಮನ್‌ಪ್ರೀತ್ ಕೌರ್ ಎಂಬ ಹಳೆ ಬೇರು. ಪ್ರತೀಕಾ ರಾವಲ್, ದೀಪ್ತಿ ಶರ್ಮಾ, ಶಫಾಲಿ ವರ್ಮಾ, ಶ್ರೀ ಚರಣಿ ಎಂಬ ಹೊಸ ಚಿಗುರುಗಳು. ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್, ಅಮನ್ಜೋತ್ ಕೌರ್ ಅವರನ್ನೊಳಗೊಂಡ ಕಾಂಡ... ಭಾರತ ಮಹಿಳಾ ತಂಡದ ವೃಕ್ಷವೀಗ ಹೀಗೆ ಹೆಮ್ಮರ. ಅದರ ಮೇಲೆ ಸೂರ್ಯಶಾಖ ಬೀರಿ ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಇಂಧನವಾದವರು ತರಬೇತುದಾರ ಅಮೋಲ್ ಮಜುಂದಾರ್.

ವಿಶ್ವಕಪ್ ಎತ್ತಿಹಿಡಿದ ಹೆಣ್ಣುಮಕ್ಕಳಲ್ಲಿ ಹಳ್ಳಿಗಾಡಿನವರ ಸಂಖ್ಯೆ ದೊಡ್ಡದು. ಸಣ್ಣ ತರಕಾರಿ ಅಂಗಡಿ ನಡೆಸಿದ ತಂದೆ, ಮಗಳು ರಿಚಾ ಕ್ರಿಕೆಟ್ ಕನಸಿಗೆ ನೀರೆರೆದ ಭಾವುಕ ಸಣ್ಣಕಥೆ ಇದೆ. ತಂದೆ ಹಿಂದೊಮ್ಮೆ ಮತಾಂತರ ಮಾಡುವ ಹುನ್ನಾರ ನಡೆಸಿದರು ಎಂಬ ಆರೋಪದ ಕಾರಣ ಕೋಣೆಯಲ್ಲಿ ಕದವಿಕ್ಕಿಕೊಂಡು ಬಿಕ್ಕುತ್ತಾ ಮಣ್ಣಲ್ಲಿ ಬಿದ್ದು ಮುಗಿಲಲ್ಲಿ ಎದ್ದ ಜೆಮಿಮಾ ಬದುಕಿನ ಮಾನವೀಯ ಅಧ್ಯಾಯ ಇದೆ. ಎಡಗೈ ಸ್ಪಿನ್ ಬೌಲಿಂಗ್ ಕೌಶಲ ತನ್ನಲ್ಲಿ ಚೆನ್ನಾಗಿಯೇ ಇದೆ ಎಂದು ಈ ವರ್ಷವಷ್ಟೇ ಸಾಬೀತುಪಡಿಸಿದ ಆಂಧ್ರದ ತರುಣಿ ಶ್ರೀ ಚರಣಿ ಪ್ರಮುಖ ಅಸ್ತ್ರವಾಗಿ ಹೊರಹೊಮ್ಮಿದ್ದರಲ್ಲೂ ಆಸಕ್ತಿಕರ 'ಗೇಮ್ ಪ್ಲ್ಯಾನ್' ಉಂಟು.

ದಕ್ಷಿಣ ಆಫ್ರಿಕಾ ವಿರುದ್ಧ ಫೈನಲ್‌ನಲ್ಲಿ ಭಾರತ 52 ರನ್‌ಗಳ ಗೆಲುವು ದಾಖಲಿಸಿ ಕಪ್ ಎತ್ತಿ ಹಿಡಿಯಿತು. ಟೂರ್ನಿಯಲ್ಲಿ ಕೆಲವು ಮರೆಯಲಾಗದ ಪ್ರಮುಖ ತಿರುವುಗಳು ಇದ್ದವು. ಅವುಗಳಲ್ಲಿ ಕೆಲವನ್ನು ಇಲ್ಲಿ ಮೆಲುಕು ಹಾಕಲಾಗಿದೆ...

